63

# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ

ಜಗದ್ಗುರು ಡಾ॥ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು–570 004

ವಿಭಾಗ ......ಕನ್ನಡ......(ಸ್ನಾತಕೋತ್ತರ)......

20 – 20

15-11-2018

ವಿಷಯ : ಜಾಣ - ಜಾಣೆಯರ ಬಳಗವು
"ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ
ಅಭಿಪ್ರಾಯ ಮಂಡನೆ ಸ್ಪರ್ಧೆ"

**JSS ENTERPRISES**
**JSS Public School Campus**
**Dr. S. Radha Krishna Nagara**
**Teachers Layout, Mysuru-570 029**

ಜಾಣ - ಜಾಣೆಯರ ಬಳಗವು "ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆ"

15 - 11 - 2018



ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರಜ್ಞನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 15.11.2018

## ಪ್ರಕಟಣೆಯ ಕೃಪೆಗಾಗಿ

## ಸಾಹಿತ್ಯದ ಓದುವಿಕೆ ಚಿಂತನೆ ಮತ್ತು ಅಭಿರುಚಿಯನ್ನು ರೂಪಿಸುತ್ತದೆ

– ಪ್ರೊ. ಬಿ. ಜಯಲಕ್ಷ್ಮಿ

'ಓದು ವಿಸ್ತಾರವಾದಷ್ಟು ಬದುಕನ್ನು ವಿಶಾಲಭಾವದಿಂದ ನೋಡಲು ಸಾಧ್ಯ. ಸಾಹಿತ್ಯದ ಓದುವಿಕೆಯು ಚಿಂತನೆ ಮತ್ತು ಭಿರುಚಿಯನ್ನು ರೂಪಿಸುತ್ತದೆ' ಎಂದು ಬನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ. ಯಲಕ್ಷ್ಮಿಯವರು ಅಭಿಪ್ರಾಯಪಟ್ಟರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ತಕೋತ್ತರ ವಿಭಾಗದ ಜಾಣ – ಜಾಣೆಯರ ಬಳಗವು ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಯೋಗದಲ್ಲಿ ಹಮ್ಮಿಕೊಂಡಿದ್ದ ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆಯಲ್ಲಿ ಮುಖ್ಯ ಥಿಗಳಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. 'ಆತ್ಮ ವಿಶ್ವಾಸವಿದ್ದಾಗ ಅಭಿಪ್ರಾಯ ಮಂಡನೆಗೆ ಹೆದರಬೇಕಾಗಿಲ್ಲ. ಕಾರನ ಮತ್ತು ಕೃತಿಯ ಆಶಯದ ಮೇಲೆ ಸಾಹಿತ್ಯ ಕೃತಿಯ ಅಧ್ಯಯನ ಮತ್ತು ಚರ್ಚೆ ನಡೆದರೆ ಅದು ಯೋಗ್ಯಕರವಾಗಿರುತ್ತದೆ. ಕೆಲವೊಂದು ಕೃತಿಗಳನ್ನು ವಾಸ್ತವ ನೆಲೆಗಟ್ಟಿನಲ್ಲಿಯೇ ನೋಡಲು ಸಾಧ್ಯವಿಲ್ಲ. ಕಾಲ್ಪನಿಕ ಗತ್ತೊಂದನ್ನು ನಾವು ಸೃಷ್ಟಿಸಿಕೊಳ್ಳಬೇಕಾಗುತ್ತದೆ' ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ವಿ. ಸಾಂಬಶಿವಯ್ಯನವರು 'ಭಾಷೆಯು ಸಂವಹನಕ್ಕೆ ಇರುವ ಒಂದು ಅಮೂಲ್ಯ ಸಾಧನ. ಪುಸ್ತಕಗಳ ಓದು ದಭಂಡಾರವನ್ನು ಹೆಚ್ಚಿಸಿ ಸಂವಹನ ಕೌಶಲ್ಯವನ್ನು ವೃದ್ಧಿಸುತ್ತದೆ. ಜೊತೆಗೆ ಬದುಕಿನಲ್ಲಿ ಬರುವ ಕಷ್ಟ ಕಾರ್ಪಣ್ಯಗಳನ್ನು ುರಿಸುವ ಧೈರ್ಯವನ್ನು ನೀಡುತ್ತದೆ. ಯಾವುದೇ ಸಾಹಿತ್ಯ ಕೃತಿಯ ಬಗ್ಗೆ ಮಾತನಾಡಬೇಕೆಂದರೆ ವಿಶ್ಲೇಷಣಾತ್ಮಕ ಓದು ೇ ಮುಖ್ಯವಾದುದು. ಇದು ನಿಯತವಾದ ಓದಿನ ಕಲಿಕೆಯಿಂದ ಬರುತ್ತದೆ. ಆದ್ದರಿಂದ ನಿರ್ದಿಷ್ಟ ಸಮಯವನ್ನು ಪ್ರತಿದಿನ ಸ್ತಕಗಳ ಓದಿಗೆ ವಿದ್ಯಾರ್ಥಿಗಳು ಮೀಸಲಿಡಬೇಕು' ಎಂದು ಕರೆಕೊಟ್ಟರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಭಾಗದ ುಖ್ಯಸ್ಥರಾದ ಡಾ. ಬಿ.ಎಸ್. ಸುದೀಪ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತ ಕೋರಿದರು. ಕು. ಜ್ಯೋತಿಭಟ್ ರ್ಥಿಸಿದರು. ಶ್ರೀ ಪ್ರಸಾದ್ ವಂದಿಸಿದರು. ಶ್ರೀಮತಿ ಅಶ್ವಿನಿ ನಿರೂಪಿಸಿದರು. ಅಧ್ಯಾಪಕರು, ವಿದ್ಯಾರ್ಥಿಗಳು ರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸುಮಾರು 25 ವಿವಿಧ ಕೃತಿಗಳನ್ನು ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಂಡಿಸಿದರು.


,
ಪಾದಕರು

ಪ್ರಾಂಶುಪಾಲರು
ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025

ಆಂದೋಲನ 17-11-2018

# ಜೆಎಸ್‌ಎಸ್‌ನಲ್ಲಿ ನನ್ನ ಮೆಚ್ಚಿನ ಪುಸ್ತಕ ಅಭಿಪ್ರಾಯ ಮಂಡನೆ ಸ್ಪರ್ಧೆ

## ಓದಿನಿಂದ ಸಾಹಿತ್ಯದ ಅಧ್ಯಯನ ಚಿಂತನೆ ಸಾಧ್ಯ: ಪ್ರೊ.ಬಿ.ಜಯಲಕ್ಷ್ಮೀ ಅಭಿಮತ



ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಏರ್ಪಡಿಸಿದ್ದ ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆಯನ್ನು ಪ್ರೊ.ಬಿ.ವಿ.ಸಾಂಬಶಿವಯ್ಯ ಉದ್ಘಾಟಿಸಿದರು. ಪ್ರೊ.ಬಿ.ಜಯಲಕ್ಷ್ಮೀ, ಪ್ರೊ.ಎಂ.ಮಹದೇವಪ್ಪ ಮುಂತಾದವರು ಚಿತ್ರದಲ್ಲಿದ್ದಾರೆ.

ಮೈಸೂರು,ನ.೧೬– ಓದು ವಿಸ್ತಾರವಾದಷ್ಟು ಬದುಕನ್ನು ವಿಶಾಲಭಾವದಿಂದ ನೋಡಲು ಸಾಧ್ಯ. ಸಾಹಿತ್ಯದ ಅಧ್ಯಯನವು ಚಿಂತನೆ ಮತ್ತು ಅಭಿರುಚಿಯನ್ನು ರೂಪಿಸುತ್ತದೆ ಎಂದು ಬನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಬಿ.ಜಯಲಕ್ಷ್ಮೀ ತಿಳಿಸಿದರು.

ನಗರದ ಬಿ.ಎನ್.ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ–ಜಾಣೆಯರ ಬಳಗವು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆಯಲ್ಲಿ ಅವರು ಮಾತನಾಡಿದರು.

ಆತ್ಮವಿಶ್ವಾಸವಿದ್ದಾಗ ಅಭಿಪ್ರಾಯ ಮಂಡನೆಗೆ ಹೆದರಬೇಕಾಗಿಲ್ಲ. ಕೃತಿಕಾರನ ಮತ್ತು ಕೃತಿಯ ಆಶಯದ ಮೇಲೆ ಸಾಹಿತ್ಯ ಕೃತಿಯ ಅಧ್ಯಯನ ಮತ್ತು ಚರ್ಚೆ ನಡೆದರೆ ಅದು ಆರೋಗ್ಯಕರವಾಗಿರುತ್ತದೆ. ಕೆಲವೊಂದು ಕೃತಿಗಳನ್ನು ವಾಸ್ತವ ನೆಲೆಗಟ್ಟಿನಲ್ಲಿಯೇ ನೋಡಲು ಸಾಧ್ಯವಿಲ್ಲ. ಕಾಲ್ಪನಿಕ ಜಗತ್ತೊಂದನ್ನು ನಾವು ಸೃಷ್ಟಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

ಇದಕ್ಕೂ ಮುನ್ನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಸಮಾರಂಭ ಉದ್ಘಾಟಿಸಿ ಮಾತನಾಡಿ, ಭಾಷೆಯು ಸಂವಹನಕ್ಕೆ ಇರುವ ಒಂದು ಅಮೂಲ್ಯ ಸಾಧನ. ಓದು ಶಬ್ದ ಭಂಡಾರವನ್ನು ಹೆಚ್ಚಿಸಿ ಸಂವಹನ ಕೌಶಲವನ್ನು ವೃದ್ಧಿಸುತ್ತದೆ. ಜತೆಗೆ ಬದುಕಿನಲ್ಲಿ ಬರುವ ಕಷ್ಟ ಕಾರ್ಪಣ್ಯಗಳನ್ನು ಎದುರಿಸುವ ಧೈರ್ಯವನ್ನು ನೀಡುತ್ತದೆ. ಯಾವುದೇ ಸಾಹಿತ್ಯ ಕೃತಿಯ ಬಗ್ಗೆ ಮಾತನಾಡಬೇಕೆಂದರೆ ವಿಶ್ಲೇಷಣಾತ್ಮಕ ಓದು ಅತೀ ಮುಖ್ಯ ಎಂದರು.

ಪ್ರಾಂಶುಪಾಲ ಪ್ರೊ.ಎಂ.ಮಹದೇವಪ್ಪ ಉಪಸ್ಥಿತರಿದ್ದರು. ವಿಭಾಗದ ಮುಖ್ಯಸ್ಥ ಡಾ.ಬಿ.ಎಸ್.ಸುದೀಪ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು. ಜ್ಯೋತಿ ಭಟ್ ಪ್ರಾರ್ಥಿಸಿದರು. ಪ್ರಸಾದ್ ವಂದಿಸಿದರು. ಅಶ್ವಿನಿ ನಿರೂಪಿಸಿದರು. ಸುಮಾರು ೨೫ ವಿವಿಧ ಕೃತಿಗಳನ್ನು ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಮಂಡಿಸಿದರು.

ವಿಶ್ವವಾಣಿ 18 - 11 - 2018

# ಸಾಹಿತ್ಯದ ಓದು ಅಭಿರುಚಿ ರೂಪಿಸುತ್ತದೆ: ಜಯಲಕ್ಷ್ಮೀ

**ವಿಶ್ವವಾಣಿ ಸುದ್ದಿಮನೆ** ಮೈಸೂರು



ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆಯನ್ನು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಉದ್ಘಾಟಿಸಿದರು.

ಓದು ವಿಸ್ತಾರವಾದಷ್ಟು ಬದುಕನ್ನು ವಿಶಾಲ ಭಾವದಿಂದ ನೋಡಲು ಸಾಧ್ಯ. ಸಾಹಿತ್ಯದ ಓದುವಿಕೆಯು, ಚಿಂತನೆ ಅಭಿರುಚಿ ರೂಪಿಸುತ್ತದೆ ಎಂದು ಬನ್ನೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ. ಜಯಲಕ್ಷ್ಮೀ ಅಭಿಪ್ರಾಯಪಟ್ಟರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ - ಜಾಣೆಯರ ಬಳಗ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ಹಮ್ಮಿಕೊಂಡಿದ್ದ ನನ್ನ ಮೆಚ್ಚಿನ ಪುಸ್ತಕ ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಆತ್ಮವಿಶ್ವಾಸವಿದ್ದಾಗ ಅಭಿಪ್ರಾಯ ಮಂಡನೆಗೆ ಹೆದರಬೇಕಾಗಿಲ್ಲ. ಕೃತಿಕಾರನ ಮತ್ತು ಕೃತಿಯ ಆಶಯದ ಮೇಲೆ ಸಾಹಿತ್ಯ ಕೃತಿಯ ಅಧ್ಯಯನ ಮತ್ತು ಚರ್ಚೆ ನಡೆದರೆ ಅದು ಆರೋಗ್ಯಕರವಾಗಿರುತ್ತದೆ. ಕೆಲವೊಂದು ಕೃತಿಗಳನ್ನು ವಾಸ್ತವ ನೆಲೆಗಟ್ಟಿನಲ್ಲಿಯೇ ನೋಡಲು ಸಾಧ್ಯವಿಲ್ಲ. ಕಾಲ್ಪನಿಕ ಜಗತ್ತೊಂದನ್ನು ನಾವು ಸೃಷ್ಟಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಭಾಷೆಯು ಸಂವಹನಕ್ಕೆ ಇರುವ ಒಂದು ಅಮೂಲ್ಯ ಸಾಧನ. ಪುಸ್ತಕಗಳ ಓದು ಶಬ್ದ ಭಂಡಾರವನ್ನು ಹೆಚ್ಚಿಸಿ ಸಂವಹನ ಕೌಶಲ್ಯವನ್ನು ವೃದ್ಧಿಸುತ್ತದೆ. ಜತೆಗೆ ಬದುಕಿನಲ್ಲಿ ಬರುವ ಕಷ್ಟ ಕಾರ್ಪಣ್ಯಗಳನ್ನು ಎದುರಿಸುವ ಧೈರ್ಯವನ್ನು ನೀಡುತ್ತದೆ. ಯಾವುದೇ ಸಾಹಿತ್ಯ ಕೃತಿಯ ಬಗ್ಗೆ ಮಾತನಾಡಬೇಕೆಂದರೆ ವಿಶ್ಲೇಷಣಾತ್ಮಕ ಓದು ಅತೀ ಮುಖ್ಯವಾದುದು. ಇದು ನಿಯತವಾದ ಓದಿನ ಕಲಿಕೆಯಿಂದ ಬರುತ್ತದೆ. ಆದ್ದರಿಂದ ನಿರ್ದಿಷ್ಟ ಸಮಯವನ್ನು ಪ್ರತಿದಿನ ಪುಸ್ತಕಗಳ ಓದಿಗೆ ವಿದ್ಯಾರ್ಥಿಗಳು ಮೀಸಲಿಡಬೇಕು ಎಂದು ಕರೆಕೊಟ್ಟರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ. ಮಹದೇವಪ್ಪ, ವಿಭಾಗದ ಮುಖ್ಯಸ್ಥ ಡಾ. ಬಿ.ಎಸ್. ಸುಧೀಪ್ ಇದ್ದರು. ಸುಮಾರು 25 ವಿವಿಧ ಕೃತಿಗಳನ್ನು ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಮಂಡಿಸಿದರು.

ವಿಜಯವಾಣಿ 18 - 11 - 2018

# ಸಾಹಿತ್ಯ ಓದುವಿಕೆಯಿಂದ ಚಿಂತನೆ, ಅಭಿರುಚಿ ರೂಪು

**ವಿಜಯವಾಣಿ ಸುದ್ದಿಜಾಲ ಮೈಸೂರು**



ನಗರದ ಊಟಿರಸ್ತೆಯ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆಯನ್ನು ಪ್ರೊ.ಬಿ.ವಿ.ಸಾಂಬಶಿವಯ್ಯ ಉದ್ಘಾಟಿಸಿದರು.

» **ಪ್ರಾಂಶುಪಾಲರಾದ ಪ್ರೊ.ಬಿ. ಜಯಲಕ್ಷ್ಮೀ ಅಭಿಮತ**

» **ಅಭಿಪ್ರಾಯ ಮಂಡನೆ ಸ್ಪರ್ಧೆ**

ಸಾಹಿತ್ಯದ ಓದುವಿಕೆಯಿಂದ ಚಿಂತನೆ, ಅಭಿರುಚಿ ರೂಪುಗೊಳ್ಳುವುದಲ್ಲದೆ ಬದುಕನ್ನು ವಿಶಾಲಭಾವದಿಂದ ನೋಡಲು ಸಾಧ್ಯವಾಗುತ್ತದೆ ಎಂದು ಬನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಬಿ.ಜಯಲಕ್ಷ್ಮೀ ಅಭಿಪ್ರಾಯಪಟ್ಟರು.

ನಗರದ ಊಟಿರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ-ಜಾಣೆಯರ ಬಳಗ, ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಹಮ್ಮಿಕೊಂಡಿದ್ದ 'ನನ್ನ ಮೆಚ್ಚಿನ ಪುಸ್ತಕ' ಕುರಿತ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೃತಿಕಾರನ ಕೃತಿಯ ಆಶಯದ ಮೇಲೆ ಸಾಹಿತ್ಯ ಅಧ್ಯಯನ ಮತ್ತು ಚರ್ಚೆ ನಡೆದರೆ ಅದು ಆರೋಗ್ಯಕರವಾಗಿರುತ್ತದೆ. ಕೆಲವೊಂದು ಕೃತಿಯನ್ನು ವಾಸ್ತವ ನೆಲೆಗಟ್ಟಿನಲ್ಲಿಯೇ ನೋಡಲು ಸಾಧ್ಯವಿಲ್ಲ. ಕಾಲ್ಪನಿಕ ಜಗತ್ತೊಂದನ್ನು ನಾವು ಸೃಷ್ಟಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಭಾಷೆಯು ಸಂವಹನಕ್ಕೇರುವ ಒಂದು ಅಮೂಲ್ಯ ಸಾಧನ. ಪುಸ್ತಕಗಳ ಓದು ಶಬ್ದ ಭಂಡಾರವನ್ನು ಹೆಚ್ಚಿಸಿ ಸಂವಹನ ಕೌಶಲವನ್ನು ವೃದ್ಧಿಸುತ್ತದೆ. ಅಲ್ಲದೆ, ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸುವ ಧೈರ್ಯವನ್ನು ನೀಡುತ್ತದೆ. ಯಾವುದೇ ಸಾಹಿತ್ಯ ಕೃತಿಯ ಬಗ್ಗೆ ಮಾತನಾಡಬೇಕೆಂದರೆ ವಿಶ್ಲೇಷಣಾತ್ಮಕ ಓದು ಅತಿ ಮುಖ್ಯವಾದುದ್ದು ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ. ಮಹದೇವಪ್ಪ ಹಾಜರಿದ್ದರು. ವಿಭಾಗದ ಮುಖ್ಯಸ್ಥ ಡಾ.ಬಿ.ಎಸ್. ಸುದೀಪ್ ಸ್ವಾಗತಿಸಿದರು. ಜ್ಯೋತಿಭಟ್ ಪ್ರಾರ್ಥಿಸಿ, ಪ್ರಸಾದ್ ವಂದಿಸಿದರು. ಸ್ಪರ್ಧೆಯಲ್ಲಿ ಸುಮಾರು 25 ವಿವಿಧ ಕೃತಿಗಳ ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಮಂಡಿಸಿದರು.